ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 710
ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 19-02-2018
ಉತ್ತರಿಸುವ ಸಚಿವರು : ಮಾನ್ಯ ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು.

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಹಳ ಅನಾದಿಕಾಲದಿಂದಲೂ ಕೃಷಿ ಮನೋರಂಜನೆ ಕ್ರೀಡೆ; ದೈವಾರಾಧನ ಹಾಗೂ ಸಾಂಸ್ಕೃತಿಕ ಚಟುವಟಿಕೆಯಾಗಿ ಕಂಬಳಗಳನ್ನು ನಡೆಸಲಾಗುತ್ತಿದ್ದು, ಪ್ರಸ್ತುತ ಅವು ನಶಿಸಿಹೋಗುತ್ತಿರುವುದಕ್ಕೆ ಕಾರಣಗಳೇನು?	ಕಂಬಳ ಕ್ರೀಡೆಗೆ 700 – 1000 ವರ್ಷಗಳ ಸುದೀರ್ಘ ಇತಿಹಾಸವಿದ್ದು, ಈ ಕ್ರೀಡೆ ಕರಾವಳಿ ಭಾಗದ ಜನರ ಸಂಪ್ರದಾಯ, ಸಂಸ್ಕೃತಿಯೇ ಆಗಿಹೋಗಿದೆ. ಇದಕ್ಕಾಗಿಯೇ ಕೋಣಗಳನ್ನು ವಿಶೇಷವಾಗಿ ಸಾಕಿ ಅವುಗಳಿಗೆ ತರಬೇತಿ ನೀಡಲಾಗುತ್ತಿದ್ದು, ಹಿಂಸಾರಹಿತವಾಗಿ ಕೋಣಗಳನ್ನು ಕಂಬಳದಲ್ಲಿ ಬಳಸಲು ಕಾಲಕಾಲಕ್ಕೆ ಕಾನೂನಿನ ಚೌಕಟ್ಟಿನೊಳಗೆ (ಪ್ರಾಣಿ ಹಿಂಸಾ ತಡೆಗಟ್ಟುವ ಕಾಯ್ದೆ 1960 ರನ್ವಯ) ಸೂಚನೆ ನೀಡಲಾಗುತ್ತಿದೆ. ದೈವಾರಾದನೆಯೇ ಪ್ರಮುಖ ವಿಷಯವಾಗಿ ಪ್ರತಿವರ್ಷ ನವೆಂಬರ್ 15 ರಿಂದ ಡಿಸೆಂಬರ್ 15ರ ಸಂಕ್ರಮಣದ 1 ತಿಂಗಳ ಅವಧಿಯಲ್ಲಿ ಸಮಾಜದ ಎಲ್ಲಾ ಸಮುದಾಯಗಳನ್ನು ಒಳಗೊಂಡು ಸಾಂಪ್ರದಾಯಿಕ ಕಂಬಳವನ್ನು ನಡೆಸಿ ರೈತರ 2ನೇ ಬೆಳೆಗೆ ಪ್ರಾಧಾನ್ಯತೆ ಕೊಡುವಾಗ ದೇವರಲ್ಲಿ ಪ್ರಾರ್ಥನೆ ಸಲ್ಲಿಸುವ ವಿಧಿ ವಿಧಾನಗಳೊಂದಿಗೆ ವಿಶಾಲವಾದ ಗದ್ದೆಯಲ್ಲಿ ಯಾವುದೇ ಕರೆ (track) ಗಳಿಲ್ಲದೆ ನಡೆಸಲಾಗುತ್ತಿದೆ. ಈ ಸಂದರ್ಭ ರೈತರು ತಾವು ಬೆಳೆಸುವ ಬೆಳೆಗೆ ವಿಘ್ನಗಳು ಬಾರದಂತೆ, ಅತಿಹೆಚ್ಚು ಇಳುವರಿ ಬರುವಂತೆ ದೇವರಲ್ಲಿ ಪ್ರಾರ್ಥಿಸುತ್ತಾರೆ ಎಂಬುದು ಪ್ರತೀತಿ. ದೇವರ ಆಚರಣೆಯಲ್ಲಿ ಸಂಬಂಧಪಟ್ಟ ಹಿರಿಯ ವ್ಯಕ್ತಿಯ ನೇತೃತ್ವದಲ್ಲಿ ಸಾಂಪ್ರದಾಯಿಕ ಕಂಬಳ ನಡೆಸಲಾಗುತ್ತದೆ. ಪ್ರತಿ ಸಮುದಾಯದಿಂದ ಕೋಣಗಳನ್ನು ಸಿಂಗರಿಸುವ / ಓಡಿಸುವ / ಹಿಡಿಯುವ / ನೀರು ಪೂರೈಕೆ ಮಾಡುವ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಕಂಬಳದ ಸಂದರ್ಭದಲ್ಲಿ ಪ್ರಾಧಾನ್ಯತೆ ನೀಡಲಾಗುತ್ತದೆ. ಅನಾದಿ ಕಾಲದಿಂದಲೂ ಕಂಬಳ ಜರುಗಿಸಿರುವ ಬಗ್ಗೆ ಉಲ್ಲೇಖಗಳಿವೆ. ಹೀಗಾಗಿ ಸಾಂಪ್ರದಾಯಿಕ ಕಂಬಳಗಳು ದೈವಾರಾದನೆಯ ಮುಖ್ಯ ವಿಷಯವಾಗಿಟ್ಟುಕೊಂಡು ನಿರಂತರವಾಗಿ ನಡೆಯಬೇಕಾಗಿರುವುದಾಗಿ ಸ್ಥಳೀಯ ಕೃಷಿಕರ ಆಶಯವಾಗಿದ್ದು ಸಂಪ್ರದಾಯದಂತೆ ನಡೆಸಬೇಕಿರುತ್ತದೆ ಎಂಬುದು ಪ್ರತೀತಿ.
		ಇತ್ತೀಚಿನ ದಿನಗಳಲ್ಲಿ ದಿನಗೂಲಿ ಕಾರ್ಮಿಕರ ಕೊರತೆಯಿಂದಾಗಿ ಜಿಲ್ಲೆಯ ಹಲವು ಭಾಗಗಳಲ್ಲಿ ಯಾಂತ್ರೀಕರಣದ ಮೂಲಕ ಭತ್ತ ಬೇಸಾಯ ನಡೆಸುತ್ತಿದ್ದು, ಕೋಣಗಳ/ ಉಳುಮೆ ಹೋರಿಗಳ ಸಂಖ್ಯೆಯು ಕಡಿಮೆಯಾಗುತ್ತಿದೆ. ಆದ್ದರಿಂದ ಬೇಸಾಯಕ್ಕೆ / ಕಂಬಳಕ್ಕೆ ಉಪಯೋಗಿಸಲ್ಪಡುವ ಕೋಣಗಳ ಸಂಖ್ಯೆ ಸ್ವಾಭಾವಿಕವಾಗಿ ಕಡಿಮೆಯಾಗುತ್ತಿದ್ದರೂ ಸಹ ಕಂಬಳ ಆಚರಣೆಗಾಗಿ ಹರಕೆ ಹಾಗೂ ಗ್ರಾಮೀಣ ಮನೋರಂಜನೆಗಾಗಿ ದೈವಾರಾದನೆಗೆ ಪೂರಕವಾಗಿ ಕೋಣಗಳನ್ನು ಪೋಷಿಸಲಾಗುತ್ತಿದೆ. ಇದಲ್ಲದೆ ಗ್ರಾಮೀಣ ಭಾಗಗಳಲ್ಲಿ ಸ್ಪರ್ಧಾತ್ಮಕವಾಗಿ ಕೋಣಗಳ ಕಂಬಳಗಳನ್ನು ನಿರ್ದಿಷ್ಟ ಗ್ರಾಮಗಳಲ್ಲಿ ಜೋಡುಕರೆ ಕಂಬಳದ ಹೆಸರಿನಲ್ಲಿ ಆಯೋಜಿಸಲಾಗುತ್ತಿದೆ. ಈ ಕಂಬಳಗಳನ್ನು ನಡೆಸುವಾಗ ಕಾನೂನಿನ ಚೌಕಟ್ಟಿನೊಳಗೆ ನಡೆಸಲು ಅನುಮತಿ ನೀಡಲಾಗುತ್ತಿದೆ.

		ಕಂಬಳದ ಬಗ್ಗೆ ವಿವಿಧ ಪ್ರಾಣಿ ಕಲ್ಯಾಣ ಸ್ವಯಂಸೇವಾ ಸಂಸ್ಥೆಗಳು ನ್ಯಾಯಾಲಯದಲ್ಲಿ ದಾವೆಗಳನ್ನು ಹೂಡಿದ್ದು, ಪ್ರಸ್ತುತ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದೆ. ಆದಾಗ್ಯೂ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಈ ಕ್ರೀಡೆ ನಶಿಸಿ ಹೋಗಿರುವುದಿಲ್ಲ.
ಆ	ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ ವರ್ಷ ನಡೆಯುವ ಕಂಬಳಗಳ ಸಂಖ್ಯೆ ಎಷ್ಟು; ಅವು ಯಾವುವು; [ತಾಲ್ಲೂಕುವಾರು, ಗ್ರಾಮವಾರು ವಿವರ ನೀಡುವುದು];	ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿ ವರ್ಷ ನಡೆಯು ಕಂಬಳಗಳ ಸಂಖ್ಯೆ ಈ ಕೆಳಕಂಡಂತಿವೆ. ಉಡುಪಿ ಜಿಲ್ಲೆಯಲ್ಲಿ ಪ್ರತಿ ವರ್ಷ ನಡೆಯುವ ಕಂಬಳಗಳ ವಿವರ

ಕ್ರ. ಸಂ.	ತಾಲ್ಲೂಕು	ಕಂಬಳ ನಡೆಯುವ ಸ್ಥಳ
ಸಾಂಪ್ರದಾಯಿಕ ಕಂಬಳ		
1	ಉಡುಪಿ	ವಂಡಾರು
2		ಚೇರ್ಕಾಡಿ
3		ಪೇರಂಜೆ
4		ಯಡ್ತಾಡಿ
5		ಬಾರ್ಕೂರು
6		ಹಂದಾಡಿ
7		ನಡೂರು
8		ಮುದ್ದುಮನೆ
9		ಮಣೂರು
10		ಬನ್ನಾಡಿ
11		ಕೋಣ್ಸೆ
12		ಕೊಡವೂರು – ಕಂಬಳಕಟ್ಟ
13		ಪೆರ್ಣಂಕಿಲ
14		ಆತ್ರಾಡಿ
15		ಪರೀಕ
16		ಕಟಪಾಡಿ
17		ಶಿರ್ವ ಕೋಡು
18		ಶಿರ್ವ ನಡಿಗುತ್ತು
19		ಬೆಟ್ಲಾಡಿ
20		ಓರ್ವಾಡಿ
21		ಕಂಜೂರು
22		ಬೈದಬೆಟ್ಟು
23		ಹೊರ್ಲಾಳಿ
24		ಬಿಲ್ಲಾಡಿ
25		ಓರೇಬೆಟ್ಟು
26	ಕುಂದಾಪುರ	ಮೊಳಹಳ್ಳಿ
27		ಗುಲ್ವಾಡಿ
28		ನಾವುಂದ
29		ಕೊರ್ಗಿ
30		ಮೂಡ್ಲಕಟ್ಟೆ
31		ತಲ್ಲೂರು
32		ತಗ್ಗರ್ಸೆ
33		ಸಿದ್ದಾಪುರ – ಕಡ್ರಿ
34	ಕಾರ್ಕಳ	ತನ್ನಸೆ – ಕುಚ್ಚೂರು
35		ನಿಂಜೂರು

ಜೋಡುಕರೆ ಕಂಬಳಗಳು

1	ಉಡುಪಿ	ಅಡ್ವೆ – ನಂದಿಕೂರು
2		ಅಲ್ತಾರು
3		ಕಟಪಾಡಿ ಬೀಡು
4	ಕಾರ್ಕಳ	ಬಾರಾಡಿಬೀಡು
5		ಮಿಯ್ಯಾರು
6		ಈದು

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುವ ಕಂಬಳಗಳ ವಿವರ

ಕ್ರ ಸಂ	ತಾಲ್ಲೂಕು	ಕಂಬಳಗಳ ಸಂಖ್ಯೆ	ಕಂಬಳ ಜರುಗುವ ಸ್ಥಳ	ಗ್ರಾಮ
1	ಬಂಟ್ವಾಳ	2	ಕಕ್ಕೆಪದವು	ಕಕ್ಕೆಪದವು ಗ್ರಾಮ
			ಹೊಕ್ಕಾಡಿಗೋಳಿ	ಎಲ್ಲಿನಡು ಗೋಡುಗ್ರಾಮ
2	ಬೆಳ್ತಂಗಡಿ	2	ಬಂಗಾಡಿಕೊಲ್ಲಿ – ಸೂರ್ಯ ಚಂದ್ರ	ಮಿತ್ತಬಾಗಿಲು
			ವೇಣೂರು ಪೆರ್ಮುಡ– ಸೂರ್ಯ ಚಂದ್ರ	ವೇಣೂರು
3	ಮಂಗಳೂರು	9	ಮೂಡಬಿದ್ರೆ – ಕೋಟಿಚೆನ್ನಯ	
			ಪಿಲಿಕುಲ	
			ಕೊಟ್ಟಾರ	
			ಮುಲ್ಕಿ – ಅರಸುಕಂಬಳ	ಪಡುಪಣಂಬೂರು
			ಸುರತ್ಕಲ್ – ರಾಮ–ಲಕ್ಷ್ಮಣ	ಮಾಧವನಗರ
			ಐಕಳಬಾವ	
			ಜಪ್ಪಿನಮೊಗರು	
			ವಾಮಂಜೂರು	
			ತಲಪಾಡಿ	
4	ಪುತ್ತೂರು	2	ಉಪ್ಪಿನಂಗಡಿ – ವಿಜಯ ವಿಕ್ರಮ	ಉಪ್ಪಿನಂಗಡಿ
			ಪುತ್ತೂರು – ಕೋಟಿಚೆನ್ನಯ	ಪುತ್ತೂರು
5	ಸುಳ್ಯ	–	–	–
–	ಒಟ್ಟು	15		

ಇ ಕಂಬಳಗಳನ್ನು ನಡೆಸಲು ಈವರೆಗೆ ಸರ್ಕಾರದಿಂದ ಪ್ರೋತ್ಸಾಹ ಧನ ಅಥವಾ ಅನುದಾನ ಬಿಡುಗಡೆ ಮಾಡಲಾಗಿದೆಯೇ; (ವರ್ಷವಾರು ವಿವರ ನೀಡುವುದು);

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಕಂಬಳವನ್ನು ನಡೆಸಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಕ್ರಸಂ	ವರ್ಷ	ಕಾರ್ಯಕ್ರಮದ ಹೆಸರು	ಮೊತ್ತ
01	2015–16	ಮುಲ್ಕಿ ಸೀಮೆ ಅರಸು ಕಂಬಳ	ರೂ.1.00 ಲಕ್ಷ
02	2016–17	ಕೋಟಿ ಚೆನ್ನಯ್ಯ ಕಂಬಳ	ರೂ.2.00 ಲಕ್ಷ
03	2017–18	ಕೋಟಿ ಚೆನ್ನಯ್ಯ ಜೋಡು ಕರೆ ಕಂಬಳ	ರೂ.10.00 ಲಕ್ಷ

ಈ	ಈ ಹಿಂದಿನ ಸರ್ಕಾರವು ಕಂಬಳಗಳಿಗೆ ಅನುದಾನ ಅಥವಾ ಪ್ರೋತ್ಸಾಹ ಧನ ನೀಡಿರುವುದು ನಿಜವೇ; ನೀಡಿದ್ದಲ್ಲಿ ವಿವರ ನೀಡುವುದು;	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಪ್ರೋತ್ಸಾಹ ಧನ ನೀಡಿರುವುದಿಲ್ಲ.
ಉ	ಕಂಬಳಗಳಿಗೆ ಪ್ರೋತ್ಸಾಹ ಧನ ಅನುದಾನ ನೀಡುವ ಬಗ್ಗೆ ಯೋಜನೆ ರೂಪಿಸಲು ಸರ್ಕಾರ ಚಿಂತನೆ ಹೊಂದಿದೆಯೇ? ಇಲ್ಲವಾದಲ್ಲಿ, ಕಾರಣವೇನು?	ಕಂಬಳಗಳಿಗೆ ಪ್ರೋತ್ಸಾಹ ಧನ, ಅನುದಾನ ನೀಡುವ ಬಗ್ಗೆ ಯೋಜನೆ ರೂಪಿಸುವ ಬಗ್ಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಯಾವುದೇ ಯೋಜನೆ ಇರುವುದಿಲ್ಲ.

ಸಂಖ್ಯೆ: ಯುಸೇಇ 21 ಯುಸೇಭಾ 2018

(ಪ್ರಮೋದ್ ಮಧ್ವರಾಜ್)
ಮೀನುಗಾರಿಕೆ, ಯುವ ಸಬಲೀಕರಣ
ಹಾಗೂ ಕ್ರೀಡಾ ಸಚಿವರು.